| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 40 + 23 = 63 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 16

Total No. of Questions : 40 + 23 = 63 ] [ Total No. of Printed Pages : 16

**ಸಂಕೇತ ಸಂಖ್ಯೆ : 62-K** **ವಿಷಯ : ತೃತೀಯ ಭಾಷೆ — ಕನ್ನಡ**

**Code No. : 62-K** **Subject : Third Language — KANNADA**

ದಿನಾಂಕ : 03. 04. 2009 ] [ Date : 03. 04. 2009

ಸಮಯ : ಬೆಳಿಗ್ಗೆ 10-30 ರಿಂದ ಮಧ್ಯಾಹ್ನ 1-00 ರವರೆಗೆ ] [ Time : 10-30 A.M. to 1-00 P.M.

ಪರಮಾವಧಿ ಅಂಕಗಳು : 100 ] [ Max. Marks : 100

**FOR OFFICE USE ONLY**

**PART – A**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|---|---|
| 1. | | 8. | | 15. | | 22. | | 29. | | 36. | |
| 2. | | 9. | | 16. | | 23. | | 30. | | 37. | |
| 3. | | 10. | | 17. | | 24. | | 31. | | 38. | |
| 4. | | 11. | | 18. | | 25. | | 32. | | 39. | |
| 5. | | 12. | | 19. | | 26. | | 33. | | 40. | |
| 6. | | 13. | | 20. | | 27. | | 34. | | × | |
| 7. | | 14. | | 21. | | 28. | | 35. | | × | |

***Total Marks of Part – A***

**PART – B**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|---|---|
| 41. | | 45. | | 49. | | 53. | | 57. | | 61. | |
| 42. | | 46. | | 50. | | 54. | | 58. | | 62. | |
| 43. | | 47. | | 51. | | 55. | | 59. | | 63. | |
| 44. | | 48. | | 52. | | 56. | | 60. | | × | |

***Total Marks of Part – B***

| **Total Marks in words** | | **Grand Total** | |
|---|---|---|---|

| | | | |
|---|---|---|---|
| 1. ✓ | | | |
| 2. ✓ | | ✓ | ✓ |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

www.StudyGuideIndia.com

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೆ ಸಹಿತ ಉತ್ತರ ಪುಸ್ತಕವು **ಎರಡು** ವಿಭಾಗಗಳನ್ನು ಹೊಂದಿದೆ. ಅವು **ಎ – ವಿಭಾಗ** ಮತ್ತು **ಬಿ – ವಿಭಾಗ.**

ii) **ಎ – ವಿಭಾಗ** 40 ಪ್ರಶ್ನೆಗಳನ್ನು ಹೊಂದಿದೆ ಮತ್ತು **ಬಿ – ವಿಭಾಗ** 23 ಪ್ರಶ್ನೆಗಳನ್ನು ಹೊಂದಿದೆ.

iii) ಈ ಪ್ರಶ್ನೆ ಸಹಿತ ಉತ್ತರ ಪುಸ್ತಕದಲ್ಲೇ ಉತ್ತರಿಸಲು ಸ್ಥಳಾವಕಾಶ ಮಾಡಲಾಗಿದೆ.

iv) **ಎ – ವಿಭಾಗದಲ್ಲಿ**ರುವ ಸೂಚನೆಗಳನ್ನು ಅನುಸರಿಸಿ ಮತ್ತು ಪ್ರಶ್ನೆ ಸಹಿತ ಉತ್ತರ ಪುಸ್ತಕದಲ್ಲಿರುವ ನಾಲ್ಕು ಪರ್ಯಾಯ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿಯೇ ಪೂರ್ಣ ಉತ್ತರವನ್ನು ಬರೆಯಿರಿ.

v) **ಬಿ – ವಿಭಾಗದ** ಪ್ರತಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

## ಎ – ವಿಭಾಗ

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಪೂರ್ಣ ಉತ್ತರವನ್ನು ಬರೆಯಿರಿ : $40 \times 1 = 40$

1. ಚಿನ್ನದ ಕೋಲಿನ ಸಹಾಯದಿಂದ ರಾಜಕುಮಾರನು 'ಬಸವ'ನಾಗಿ ಎಲ್ಲಿ ತಿರುಗಿದ ?

(ಎ) ಆಕಾಶ (ಬಿ) ಕಾಡು

(ಸಿ) ಊರು (ಡಿ) ಭೂಮಿ

*ಉತ್ತರ :* ____________________

2. ರಾಜಕುಮಾರನ ಕೂಗನ್ನು ಕೇಳಿ, ನೀರು ಹೀಗೆ ಹೇಳಿತು :

(ಎ) ಹೋದಳೇ ನಿನ್ನ ತಾಯಿ ? (ಬಿ) ಬರಲಿಲ್ಲವೇ ನಿನ್ನ ತಾಯಿ ?

(ಸಿ) ಮಲಗಿದ್ದಾಳೆಯೇ ನಿನ್ನ ತಾಯಿ ? (ಡಿ) ಸಿಗಲಿಲ್ಲವೇ ನಿನ್ನ ತಾಯಿ ?

*ಉತ್ತರ :* ____________________

3. ಪೂರ್ಣಿಮಾ ಎಷ್ಟು ದಿನಗಳ ಉರುಳುಸೇವೆ ಮಾಡಿದಳು ?

(ಎ) ಹದಿನಾರು (ಬಿ) ಹನ್ನೆರಡು

(ಸಿ) ಹದಿನಾಲ್ಕು (ಡಿ) ಹತ್ತು

*ಉತ್ತರ :* ____________________

4. 'ಅಡಿಕೆ ಪತ್ರಿಕೆ'ಯನ್ನು ಪ್ರಾರಂಭಿಸಿದವರು

(ಎ) ಶ್ರೀ ಪಡ್ರೆಯವರು (ಬಿ) ತಿ.ನಂ.ಶ್ರೀ.

(ಸಿ) ನಾ. ಮೊಗಸಾಲೆ (ಡಿ) ಹಾ.ಸಾ.ಕೃ.

*ಉತ್ತರ :* ____________________

5. ವೇದವ್ಯಾಸರ ಉಪದೇಶದಂತೆ ಕೇದಾರದಲ್ಲಿ ದೇವಸ್ಥಾನ ಕಟ್ಟಿದವರು

(ಎ) ಪಾಂಡವರು (ಬಿ) ಕೌರವರು

(ಸಿ) ರಾಮಲಕ್ಷ್ಮಣರು (ಡಿ) ರಾವಣ

*ಉತ್ತರ :* ____________________



www.StudyGuideIndia.com

6. ಪಾರ್ವತಿ ಯಾವುದರ ಬಳಿ ತಪಸ್ಸು ಮಾಡಿದ್ದಳು ?

(ಎ) ಸಿಂಹ ಮುಖದ (ಬಿ) ಗೋಮುಖದ

(ಸಿ) ಹುಲಿ ಮುಖದ (ಡಿ) ಆನೆ ಮುಖದ

ಉತ್ತರ : ____________________

7. ಕೆಂಪೇಗೌಡನು ಬೆಂಗಳೂರಿನಲ್ಲಿ ಗೋಪುರಗಳನ್ನು ಈ ಶತಮಾನದಲ್ಲಿ ಪ್ರತಿಷ್ಠಾಪಿಸಿದನು :

(ಎ) ಹನ್ನೆರಡನೆಯ (ಬಿ) ಹದಿನಾಲ್ಕನೆಯ

(ಸಿ) ಹದಿನಾರನೆಯ (ಡಿ) ಹದಿನೆಂಟನೆಯ

ಉತ್ತರ : ____________________

8. ಡಾ॥ ಮರಿಗೌಡರ ಕಾರ್ಯವನ್ನು ಮೆಚ್ಚಿ ಅವರಿಗೆ ಕೃತಜ್ಞರಾಗಿರಬೇಕೆಂದು ಹೇಳಿದವರು

(ಎ) ಡಾ॥ ಸಿ.ವಿ. ರಾಮನ್ (ಬಿ) ಡಾ॥ ಎಮ್. ವಿಶ್ವೇಶ್ವರಯ್ಯ

(ಸಿ) ಡಾ॥ ಎಸ್. ರಾಧಾಕೃಷ್ಣನ್ (ಡಿ) ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ

ಉತ್ತರ : ____________________

9. ರಾಘಣ್ಣ ತಲೆಗೆ ಕೈಹೊತ್ತು ಕುಳಿತುಕೊಳ್ಳಲು ಕಾರಣ

(ಎ) ನದಿಯು ಬರಿದಾಗಿತ್ತು (ಬಿ) ತೆರೆದ ಬಾವಿ ಬತ್ತಿತ್ತು

(ಸಿ) ಕೆರೆಯ ನೀರು ಕಡಿಮೆಯಾಗಿತ್ತು (ಡಿ) ಹಳ್ಳದ ನೀರು ನಿಂತ್ತಿತ್ತು

ಉತ್ತರ : ____________________

10. 'ಕನ್ನಡ ಎನುವುದು ಜೀವನದಿ' ಈ ಪದ್ಯಭಾಗದ 'ಆಕರ ಗ್ರಂಥ'

(ಎ) ಒಣಮರದ ಗಿಳಿಗಳು (ಬಿ) ಇಂದುಮುಖಿ

(ಸಿ) ಗೀತಸಂಪುಟ (ಡಿ) ಹರಿಗೋಲು

ಉತ್ತರ : ____________________

11. ಭಾರತೀಯರನ್ನು ಬಂಧಮುಕ್ತಗೊಳಿಸಿದವರು

(ಎ) ತಿಲಕ್ (ಬಿ) ಗಾಂಧೀಜಿ

(ಸಿ) ನೆಹರೂ (ಡಿ) ಗೋಖಲೆ

ಉತ್ತರ : ____________________

12. ಬಾಲೆಯ ತವರೂರಿನ ಮನೆಯ ಕದವು ಇದರಿಂದಾಗಿತ್ತು :

(ಎ) ತಾಮ್ರ (ಬಿ) ಹಿತ್ತಾಳೆ

(ಸಿ) ಕಂಚು (ಡಿ) ಕಬ್ಬಿಣ

ಉತ್ತರ : ____________________

www.StudyGuideIndia.com

13. ನಗುವಿನ ಪರದೆಯ ಒಳಗೆ ಈ ಹಳ್ಳ ತುಳುಕಾಡಿತು :

(ಎ) ಮಾವಿನ (ಬಿ) ತೆಂಗಿನ

(ಸಿ) ಕಂಗಿನ (ಡಿ) ಬೇವಿನ

ಉತ್ತರ : ______

14. ಯುಗಾದಿಯ ಹರ್ಷವು ವರ್ಷದಿಂದ ವರ್ಷಕ್ಕೆ ಏನಾಯಿತು ?

(ಎ) ಮುದುಡಿತು (ಬಿ) ಅಡಗಿತು

(ಸಿ) ಉಡುಗಿತು (ಡಿ) ಚಿಗುರಿತು

ಉತ್ತರ : ______

15. ಚಂದ್ರ ಯಾವುದರಿಂದ ಸಿಡಿದು ಬಂದ ?

(ಎ) ಸೂರ್ಯನಿಂದ (ಬಿ) ಭೂಮಿಯಿಂದ

(ಸಿ) ಮಂಗಳದಿಂದ (ಡಿ) ನಕ್ಷತ್ರದಿಂದ

ಉತ್ತರ : ______

16. ಇದರಿಂದ ಸತ್ ಚಿಂತನೆಯು ಭದ್ರಗೊಳ್ಳುವುದು :

(ಎ) ಭಕ್ತಿಯಿಂದ (ಬಿ) ಧ್ಯಾನದಿಂದ

(ಸಿ) ಅಂತರವಾಣಿಯಿಂದ (ಡಿ) ಸದಾಚಾರದಿಂದ

ಉತ್ತರ : ______

17. 'ಹಡಗದ ಚಂದ' ಕವಿತೆಯನ್ನು ರಚಿಸಿದವರು

(ಎ) ಹೊರೆಯಾಲ ದೊರೆಸ್ವಾಮಿ (ಬಿ) ವಿ.ಕೃ. ಗೋಕಾಕ್

(ಸಿ) ಸಿದ್ದಯ್ಯ ಪುರಾಣಿಕ (ಡಿ) ವೆಂಕಟೇಶಮೂರ್ತಿ

ಉತ್ತರ : ______

18. ಹಡಗು ಇವನ ಕೌಶಲ್ಯಕ್ಕೆ ಕಳಸವಿಟ್ಟಂತಿದೆ :

(ಎ) ದೇವನ (ಬಿ) ದಾನವನ

(ಸಿ) ಮಾನವನ (ಡಿ) ರಾಕ್ಷಸನ

ಉತ್ತರ : ______

19. 'ಕಿವುಡ' ಎನ್ನುವುದು ಈ ನಾಮಪದಕ್ಕೆ ಉದಾಹರಣೆ :

(ಎ) ಅನ್ವರ್ಥ (ಬಿ) ಭಾವ

(ಸಿ) ರೂಢ (ಡಿ) ಅಂಕಿತ

ಉತ್ತರ : ______

20. 'ಅವಳು' ಪದದ ವ್ಯಾಕರಣ ವಿಶೇಷ

(ಎ) ಸರ್ವನಾಮ (ಬಿ) ನಾಮಪದ

(ಸಿ) ಕ್ರಿಯಾಪದ (ಡಿ) ಕರ್ಮಪದ

ಉತ್ತರ : ______

www.StudyGuideIndia.com

21. ಮಕ್ಕಳು ಮೈದಾನದಲ್ಲಿ ಆಟವನ್ನು ಆಡಿದರು. ಈ ವಾಕ್ಯದಲ್ಲಿರುವ ಕ್ರಿಯಾಪದ

(ಎ) ಮೈದಾನ (ಬಿ) ಮಕ್ಕಳು

(ಸಿ) ಆಡಿದರು (ಡಿ) ಆಟವನ್ನು

ಉತ್ತರ : ______

22. 'ಗೆಳತಿ' ಪದದ ಅನ್ಯಲಿಂಗ ರೂಪ

(ಎ) ಹುಡುಗ (ಬಿ) ಗೆಳೆಯ

(ಸಿ) ಹುಡುಗಿ (ಡಿ) ತಂದೆ

ಉತ್ತರ : ______

23. 'ಹುಲಿ' ಪದದ ಬಹುವಚನ ರೂಪ

(ಎ) ಹುಲಿಯಂದಿರು (ಬಿ) ಹುಲಿ

(ಸಿ) ಹುಲಿಗಳು (ಡಿ) ಹುಲಿಯವರು

ಉತ್ತರ : ______

24. 'ಶಾಲೆಯಲ್ಲಿ' ಪದದಲ್ಲಿರುವ ವಿಭಕ್ತಿ

(ಎ) ಸಪ್ತಮಿ (ಬಿ) ಚತುರ್ಥಿ

(ಸಿ) ಪಂಚಮಿ (ಡಿ) ಪ್ರಥಮಾ

ಉತ್ತರ : ______

25. 'ನೀರು' ಪದದ ಸಮಾನಾರ್ಥಕ ಪದ

(ಎ) ಸಾರು (ಬಿ) ಕಾರು

(ಸಿ) ಜಲ (ಡಿ) ಮಜಲ

ಉತ್ತರ : ______

26. 'ಬೆಳಕು' ಪದದ ವಿರುದ್ಧಾರ್ಥಕ ರೂಪ

(ಎ) ಸಾಯಂಕಾಲ (ಬಿ) ಕತ್ತಲು

(ಸಿ) ಮುಂಜಾನೆ (ಡಿ) ಮಧ್ಯಾಹ್ನ

ಉತ್ತರ : ______

27. 'ಬ್ಯಾಸಕಿ' ಇದರ ಶುದ್ಧರೂಪ ಯಾವುದು ?

(ಎ) ಬೇಸರ (ಬಿ) ಬ್ಯಾಸಕ

(ಸಿ) ಬೇಸಿಗೆ (ಡಿ) ಬೇಸಿಕೆ

ಉತ್ತರ : ______

www.StudyGuideIndia.com

28. 'ನಿಂತಾವು' ಪದದ ಗ್ರಂಥಸ್ಥ ರೂಪ

(ಎ) ನಿಲ್ಲು (ಬಿ) ಹೋಗು

(ಸಿ) ನಿಲ್ಲುವವು (ಡಿ) ಬರುವುದಿಲ್ಲ

ಉತ್ತರ : __________

29. 'ಬನ್ನಿ-ಬನ್ನಿ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ :

(ಎ) ನುಡಿಗಟ್ಟು (ಬಿ) ದ್ವಿರುಕ್ತಿ

(ಸಿ) ಅನುಕರಣಾವ್ಯಯ (ಡಿ) ಜೋಡುನುಡಿ

ಉತ್ತರ : __________

30. 'ಸರಸರನೆ' ಎನ್ನುವುದು

(ಎ) ಜೋಡುನುಡಿ (ಬಿ) ದ್ವಿರುಕ್ತಿ

(ಸಿ) ಅನುಕರಣಾವ್ಯಯ (ಡಿ) ನುಡಿಗಟ್ಟು

ಉತ್ತರ : __________

31. ಈ ಕೆಳಗಿನ ಪದಗಳಲ್ಲಿ ಅನ್ಯದೇಶಿಯ ಪದ

(ಎ) ನಾಟಕ (ಬಿ) ಬಯಲಾಟ

(ಸಿ) ಸಿನೇಮಾ (ಡಿ) ಯಕ್ಷಗಾನ

ಉತ್ತರ : __________

32. 'ಕೇದಾರೇಶ್ವರ' ಈ ಪದವನ್ನು ಬಿಡಿಸಿದಾಗ ಯಾವ ರೂಪ ಪಡೆಯುತ್ತದೆ ?

(ಎ) ಕೇದಾರ + ಅಶ್ವರ (ಬಿ) ಕೇದಾರ + ಈಶ್ವರ

(ಸಿ) ಕೇದಾರ + ಶ್ವರ (ಡಿ) ಕೇದಾರ + ಆಶ್ವರ

ಉತ್ತರ : __________

33. ಭರತಕುಮಾರನು ಎಲ್ಲಿಗೆ ಹೋದನು – ಈ ವಾಕ್ಯದಲ್ಲಿರಬೇಕಾದ ಲೇಖನ ಚಿಹ್ನೆ.

(ಎ) ಅಲ್ಪವಿರಾಮ (ಬಿ) ಪ್ರಶ್ನಾರ್ಥಕ

(ಸಿ) ಪೂರ್ಣವಿರಾಮ (ಡಿ) ಆಶ್ಚರ್ಯಸೂಚಕ

ಉತ್ತರ : __________

34. ನಾಲ್ಕು ಸಾಲುಗಳ ಪದ್ಯವು ಇದಾಗಿದೆ :

(ಎ) ತ್ರಿಪದಿ (ಬಿ) ಷಟ್ಪದಿ

(ಸಿ) ಕಂದ (ಡಿ) ರಗಳೆ

ಉತ್ತರ : __________

www.StudyGuideIndia.com

35. 'ದೇಹವೇ ದೇಗುಲ' ಇಲ್ಲಿರುವ ಅಲಂಕಾರ

(ಎ) ದೃಷ್ಟಾಂತ (ಬಿ) ರೂಪಕ

(ಸಿ) ಅನ್ವರ್ಥ (ಡಿ) ಉಪಮಾ

*ಉತ್ತರ :* ______________________

36. ಈ ಕೆಳಗಿನ ಪದಗಳಿಂದ ಒಂದನ್ನು ಆಯ್ದುಕೊಂಡು ಗಾದೆಯನ್ನು ಪೂರ್ಣ ಮಾಡಿ :

ತುಂಬಿದ ಕೊಡ

(ಎ) ಅಳುಕುವುದಿಲ್ಲ (ಬಿ) ಅರಳುವುದಿಲ್ಲ

(ಸಿ) ತುಳುಕುವುದಿಲ್ಲ (ಡಿ) ಮರಳುವುದಿಲ್ಲ

*ಉತ್ತರ :* ______________________

37. ಈ ಕೆಳಗಿನವುಗಳಲ್ಲಿ ಈ ಪದವು ಆದೇಶ ಸಂಧಿಗೆ ಉದಾಹರಣೆಯಾಗಿದೆ :

(ಎ) ಮಳೆಗಾಲ (ಬಿ) ಚಳಿಯನ್ನು

(ಸಿ) ಊರನ್ನು (ಡಿ) ಗಿರೀಷ

*ಉತ್ತರ :* ______________________

38. 'ಬರು' ಧಾತುವಿನ ನಿಷೇದಾರ್ಥಕ ರೂಪ ಯಾವುದು ?

(ಎ) ಬಂದನು (ಬಿ) ಬಾರನು

(ಸಿ) ಬಂದಾನು (ಡಿ) ಬರಲಿ

*ಉತ್ತರ :* ______________________

39. 'ಪ್ರಸಾದ' ಪದದ ತದ್ಭವ ರೂಪ

(ಎ) ಹಸಾದ (ಬಿ) ಆಶ್ರಯ

(ಸಿ) ಅಸಾದ (ಡಿ) ಪಸದ

*ಉತ್ತರ :* ______________________

40. ಕನ್ನಡ ವರ್ಣಮಾಲೆಯಲ್ಲಿರುವ 'ಅನುನಾಸಿಕ' ಅಕ್ಷರಗಳ ಸಂಖ್ಯೆ

(ಎ) 09 (ಬಿ) 05

(ಸಿ) 11 (ಡಿ) 07

*ಉತ್ತರ :* ______________________

www.StudyGuideIndia.com

## ಬಿ – ವಿಭಾಗ

ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $10 \times 2 = 20$

41. ಭರತಕುಮಾರನಿಗೆ ಸೂರ್ಯ ಮಾಡಿದ ಸಹಾಯವೇನು ?

42. ಪಂಚಪರ್ವತಗಳು ಎಲ್ಲಿವೆ ? ಅವು ಯಾವುವು ?

43. ತಗಡೂರರ ಸಂಸಾರಿಕ ಬದುಕನ್ನು ಕುರಿತು ತಿಳಿಸಿ.

www.StudyGuideIndia.com

44. ಲಾಲ್‌ಬಾಗಿನ ಹುಟ್ಟು – ಶೈಶವದ ಬಗ್ಗೆ ಲೇಖಕರ ಅಭಿಪ್ರಾಯವೇನು ?

45. ರಾಮಕೃಷ್ಣ ಸತ್ತಿರುವನೆಂದು, ರಾಣಿ ದೊರೆಗೆ ಹೇಗೆ ಹೇಳಿದಳು ?

46. ಗಾಂಧೀಜಿಯವರನ್ನು ಹಿರಿಯ ತಂದೆ ಎಂದು ಏಕೆ ಕರೆದಿದ್ದಾರೆ ?

www.StudyGuideIndia.com

47. ಯಾವ ದಾರಿಯಲ್ಲಿ ಹೋಗುವಂತೆ ಬಾಲೆಯು ಬಳೆಗಾರನಿಗೆ ತಿಳಿಸಿದಳು ?

48. ವಚನಕಾರರ ಪ್ರಕಾರ ದನದ ಸ್ವರೂಪ ಹೇಗಿತ್ತು ? ತಿಳಿಸಿ.

49. ಕವಿ ಹಡಗನ್ನು ನವಖಂಡವೆಂದು ಕರೆಯಲು ಕಾರಣವೇನು ?

50. ಹರಿಯ ನಾಮಾಮೃತ ಉಣ್ಣಲು ಏಕೆ ಆಗುತ್ತಿಲ್ಲ ?

www.StudyGuideIndia.com

ಕೆಳಗಿನ ಹೇಳಿಕೆಗಳನ್ನು ಸಂದರ್ಭ ಸಹಿತ ವಿವರಿಸಿ : 7 × 2 = 14

51. ಹೂಂ, ನಿಮ್ಮ ಕೈ ಹಿಡಿದ ಮೇಲೆ, ಇನ್ನೂ ಏನೇನು ಮಾಡಬೇಕೊ ?

52. ‘ಇದು ನಿನ್ನ ಪೂರ್ವಜನ್ಮದ ಪಾಪದ ಫಲ.’

53. ‘ಅವರು ಶುದ್ಧ ಜನಪದರು.’

54. ‘ದಾರಿ ಕಾಣದವರು ತುಂಬಾ ಮಂದಿ ಇದ್ದಾರೆ.’

www.StudyGuideIndia.com

55. 'ಪಂಪ ಮಹಾಚಲ ಜೋಡಿ ಶಿಖರಗಳು.'

56. 'ಬಡವರ ಜೀವನ ಸಾವಿನ ಸೊತ್ತು.'

57. 'ದಾಳಿ ಬಾರದ ಮುನ್ನ ಧರ್ಮವ ಗಳಿಸಿರೊ.'

www.StudyGuideIndia.com

58. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : 1 × 4 = 4

ಸುಳಿ ಮಿಂಚಿನ ________________________________

________________________________

________________________________

________________________________ ರತ್ನಾಕರನ ಕೆರೆ ॥

ಅಥವಾ

ಕಾಲನ ದೂತರು ________________________________

________________________________

________________________________

________________________________ ಸಿಕ್ಕಲು ಬೇಡಿ ॥

59. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡನ್ನು** ಕುರಿತು ತಲಾ 5-6 ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8

— ಲಾರಿ ಕೆಳಗೆ ಬಿದ್ದ ನಾಣ್ಯವನ್ನು 'ಲೊಟ್ಟ' ತೆಗೆದುಕೊಂಡದ್ದು ಹೇಗೆ ? ವಿವರಿಸಿ.

— ಗುಬ್ಬಿ ಕಂಪನಿಯಲ್ಲಿ ಕಾರಂತರು ಹೇಗೆ ಅಭಿವೃದ್ಧಿ ಹೊಂದಿದರು ? ವಿವರಿಸಿ.

— ಬಾವಿಯ ಪರಿಸರ ಏಕೆ ಭಯಾನಕವಾಗಿತ್ತು ?

www.StudyGuideIndia.com

60.

61. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಒಂದನ್ನು** ಕುರಿತು 5-6 ವಾಕ್ಯಗಳಲ್ಲಿ ಉತ್ತರ ಬರೆಯಿರಿ : $1 \times 4 = 4$

— ಕವಿಯು ವಿವರಿಸಿದಂತೆ, ಗಾಂಧೀಜಿಯವರ ವ್ಯಕ್ತಿತ್ವವನ್ನು ತಿಳಿಸಿ.

— ಭರತ ಚಕ್ರವರ್ತಿಯು ರತ್ನ ಸಿಂಹಾಸನದಲ್ಲಿ ಶೋಭಿಸಿದ ಬಗೆಯನ್ನು ವಿವರಿಸಿ.

www.StudyGuideIndia.com

62. ನೀವು ಮಹೇಶ / ಮಾಲತಿ, ಹತ್ತನೇ ತರಗತಿ, ಸರ್ಕಾರಿ ಪ್ರೌಢಶಾಲೆ, ಧಾರವಾಡ ಎಂದು ಭಾವಿಸಿ, ನಿಮ್ಮ ಶಾಲಾ ಶೈಕ್ಷಣಿಕ ಪ್ರವಾಸದಲ್ಲಿ ಭಾಗವಹಿಸಲು 500 ರೂಪಾಯಿಗಳನ್ನು ಕಳುಹಿಸಿಕೊಡುವಂತೆ, ಬೆಂಗಳೂರಿನ ಜಯನಗರ ಬಡಾವಣೆಯಲ್ಲಿ ವಾಸಿಸುತ್ತಿರುವ ನಿಮ್ಮ ತಂದೆ ನಾರಾಯಣಮೂರ್ತಿಯವರಿಗೊಂದು ಪತ್ರ ಬರೆಯಿರಿ.

ಅಥವಾ

ನೀವು ಬೆಂಗಳೂರಿನ ಸದಾಶಿವನಗರ ಬಡಾವಣೆಯ ನಿವಾಸಿ ಮೋಹನ / ರಮಾ ಎಂದು ಭಾವಿಸಿ ನಿಮ್ಮ ಬಡಾವಣೆಯಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಪ್ರಾರಂಭಿಸುವಂತೆ, ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರಿಗೊಂದು ಅರ್ಜಿ ಬರೆಯಿರಿ. $1 \times 5 = 5$

www.StudyGuideIndia.com

63. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ **ಒಂದನ್ನು** ಕುರಿತು 15 ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : $1 \times 5 = 5$

— ಕಂಪ್ಯೂಟರ್ ಶಿಕ್ಷಣದ ಅವಶ್ಯಕತೆ

— ದೂರದರ್ಶನದ ಅನುಕೂಲಗಳು

— ಕ್ರೀಡೆಗಳು

www.StudyGuideIndia.com